ತೋಟಗಾರಿಕಾ ತರಬೇತಿ ಕೇಂದ್ರಗಳು ಮತ್ತು ಕಾಲೇಜು ಸ್ಥಾಪಿಸುವ ಬಗ್ಗೆ

ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-

7 (88) ಮಾನ್ಯ ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕು ದೇವಲಾಪುರ ಹೋಬಳಿ ಮಲ್ಲಸಂದ್ರಕಾವಲ್ ಬಳಿ ಇಲಾಖೆಯ ಸುಮಾರು 900 ಎಕರೆ ಜಾಗವಿದ್ದು ಈ ಸ್ಥಳದಲ್ಲಿ ತೋಟಗಾರಿಕಾ ಬೆಳೆಗಳ ತರಬೇತಿ ಕೇಂದ್ರ ಮತ್ತು ತೋಟಗಾರಿಕೆ ಕಾಲೇಜು ಸ್ಥಾಪಿಸುವ ಉದ್ದೇಶ ಸರ್ಕಾರದ ಮುಂದೆ ಇದೆಯೇ ; ಇದ್ದಲ್ಲಿ, ಈ ಕಾರ್ಯ ಯಾವ ಹಂತದಲ್ಲಿದೆ ; ಈ ಯೋಜನೆಗೆ ಸರ್ಕಾರ ಅನುದಾನವನ್ನು ಮೀಸಲಿಡಲಾಗಿದೆಯೇ ;

(ಆ) ಮಲ್ಲಸಂದ್ರಕಾವಲ್ ತೋಟಗಾರಿಕಾ ಸಂಶೋಧನಾ ಕೇಂದ್ರದಲ್ಲಿ ಅಗತ್ಯ ಮೂಲಭೂತ ಸೌಲಭ್ಯಗಳ ಮತ್ತು ಸಿಬ್ಬಂದಿ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಖಾಲಿ ಹುದ್ದೆ ಭರ್ತಿ ಮಾಡಲು ಹಾಗೂ ಮೂಲಭೂತ ಸೌಲಭ್ಯ ಒದಗಿಸಲು ತೆಗೆದುಕೊಂಡ ಕ್ರಮಗಳೇನು ;

(ಇ) ಈ ಕೇಂದ್ರದಲ್ಲಿ ಇಸ್ರೇಲ್ ಮಾದರಿ ತೋಟಗಾರಿಕೆ ಬೆಳೆಗಳನ್ನು ಪ್ರಾಯೋಗಿಕವಾಗಿ ಅಳವಡಿಸುವ ಯೋಜನೆ ಸರ್ಕಾರದ ಮುಂದೆ ಇದೆಯೇ ; ಇದ್ದಲ್ಲಿ, ಯಾವ ಬೆಳೆಗಳನ್ನು ಪ್ರಾಯೋಗಿಕವಾಗಿ ಅಳವಡಿಸಿಕೊಳ್ಳಲಾಗಿದೆ ; ಇದರ ಸಾಧಕ-ಭಾಧಕಗಳೇನು ?